ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿನ ನೇಮಕಾತಿ ಪ್ರಕ್ರಿಯೆ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

333 (424) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮಂಡಳಿಯು 2019 ರ ಫೆಬ್ರವರಿ 20 ರಂದು ಖಾಲಿಯಿದ್ದ AEE,AE,JE,JPA,JA ಸೇರಿದಂತೆ, ಒಟ್ಟು 3646 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ 11/2 ವರ್ಷಗಳು ಕಳೆದರೂ ನೇಮಕಾತಿ ಪ್ರಕ್ರಿಯೆ ನಡೆಸದಿರಲು ಕಾರಣವೇನು;

(ಆ) ಅಲ್ಲದೇ, ಹಠಾತ್ತನೇ ದಿನಾಂಕ:21-ನವೆಂಬರ್-2020 ರಂದು ಈ ಹುದ್ದೆಗಳ ನೇಮಕಾತಿಯನ್ನು ಕೆಲವು ಆಡಳಿತಾತ್ಮಕ ಕಾರಣವನ್ನು ನೀಡಿ ರದ್ದುಗೊಳಿಸಲು ಕಾರಣವೇನು;

(ಇ) ಇನ್ನುಳಿದ ಇಲಾಖೆಗಳ ನೇಮಕಾತಿಗಳು ನಡೆಯುತ್ತಿದ್ದರೂ ಈ ಇಲಾಖೆಯ ನೇಮಕಾತಿಯನ್ನು ಮಾತ್ರ ತಡೆಹಿಡಿದು ರದ್ದುಗೊಳಿಸಲು ಕಾರಣವೇನು;

(ಈ) ಅಲ್ಲದೇ ರಾಜ್ಯದ ಲಕ್ಷಾಂತರ ಅಭ್ಯರ್ಥಿಗಳು ಈ ಇಲಾಖೆಯ ಬೇರೆ ಬೇರ ಹುದ್ದೆಗಳಿಗೆ ಪ್ರತ್ಯೇಕವಾಗಿ ರೂ.500/-ರಂತೆ ಪರೀಕ್ಷಾ ಶುಲ್ಕವನ್ನು ಭರಿಸಿದ್ದು, ಇದನ್ನು ಸರ್ಕಾರ ಮರುಪಾವತಿ ಮಾಡುತ್ತದೆಯೇ; ಹಾಗಿದ್ದಲ್ಲಿ, ಯಾವಾಗ ಮರುಪಾವತಿ ಮಾಡಲಾಗುವುದು?